ಕರುಣಾಕರ ಏನೊಂದೂ ಮಾತನಾಡದೆ ಅವನು ಹೋದ ದಾರಿಯನ್ನೇ ನೋಡುತ್ತಾ ನಿಂತನು.

* * *

ರಾಜೇಶ ಹೇಳಿದ ಮಾತುಗಳನ್ನೇ ಮೆಲುಕು ಹಾಕುತ್ತಾ ಮನೆಯ ದಾರಿ ಹಿಡಿದ ಕರುಣಾಕರ, ಮನೆಯ ಮುಂದೆ ತನ್ನ ಬೈಕ್ ನಿಲ್ಲಿಸುವಾಗ ಸಮಯ ಎಂಟು ಗಂಟೆ ದಾಟಿತ್ತು. ಒಳಗೆ ಮಗಳು ಖುಷಿ, 'ಅಪ್ಪ ಬಂದ್ರು... ಅಪ್ಪ ಬಂದ್ರು...' ಎಂದು ಕೇಕೆ ಹಾಕಿದ್ದು ಬೈಕ್‌ನಿಂದಿಳಿಯುತ್ತಿದ್ದ ಕರುಣಾಕರನಿಗೂ ಕೇಳಿಸಿತ್ತು. ಹೋಗಿ ಬಾಗಿಲ ಮುಂದೆ ನಿಂತಾಗ, ತೆರೆದುಕೊಂಡ ಬಾಗಿಲೆದುರು ಸಾವಿತ್ರಕ್ಕನ ತಂಗಿ ಸವಿತಾ ಜೊತೆ ಮಗಳು ಖುಷಿ ಕೂಡಾ ನಿಂತಿದ್ದಳು. ತುಂಬು ಮುಗುಳ್ನಗೆಯ ಬೀರಿ ನಿಂತ ಸವಿತಾ ಮುಂದೆ ಬಲವಂತದ ನಗೆಯನ್ನು ಬೀರಿದನು ಕರುಣಾಕರ. ಮಗಳು ಮುಖವನ್ನು ನೋಡುತ್ತಾ 'ಅಪ್ಪಾ...' ಅಂದಾಗ ಮಗಳನ್ನು ಬಳಸಿಕೊಂಡು ಒಳಬಂದನು,

'ಸಾರಿ ಚಿನ್ನಾ... ಇವತ್ತೇನು ತಂದಿಲ್ಲ ನಾನು. ನಿನ್ನೆ ತಂದಿರೋ ತಿಂಡಿಯಿದೆಯಲ್ವಾ ಅದನ್ನೇ ತಿನ್ನೋ... ಚಾಕ್ಲೇಟ್ ನಾಳೆ ತರ್ತೇನೆ. ಓಕೆನಾ?' ಎಂದು ಖುಷಿಯನ್ನು ಮುದ್ದುಗೆರೆದಾಗ, ತಂದೆಯ ಪ್ರೀತಿಗೆ ಕರಗಿದ ಮಗಳು ಆಗಲೆಂಬಂತೆ ತಲೆಯಾಡಿಸಿದ್ದಳು. ಅಷ್ಟರಲ್ಲಿ ಅಡುಗೆ ಮನೆಯಿಂದ ಸೀರೆಯ ಸೆರಗಿಗೆ ಕೈಯನ್ನೊರಸಿಕೊಳ್ಳುತ್ತಾ ಹೊರಬಂದ ಶಾರದಮ್ಮನವರು,

'ಯಾಕೋ ಕರುಣಾ ಇಷ್ಟು ಲೇಟು?' ಕೇಳಿದರು.

'ಹೊರಗಡೆ ಸ್ವಲ್ಪ ಕೆಲಸ ಇತ್ತು' ಕರುಣಾಕರ ಮಾತು ತೇಲಿಸಿದನು.

'ಹೊರಗಡೆ ಅಂತದ್ದೇನೋ ಕೆಲಸ ನಿಂಗೆ. ಸುಮ್ನೆ ಇಲ್ಲದ್ದನ್ನೆಲ್ಲ ತಲೆಗೆ ತುಂಬ್ಕೊಂಡು ಹೊರಗಡೆ ಆ ಗೆಳೆಯರ ಜೊತೆ ಎಲ್ಲೆಲ್ಲೋ ಅಲೆಯೋದಿಕ್ಕಿಂತ ಬೇಗ ಮನೆಗೆ ಬಂದು ಬಿಡ್ಬಾರ್ದ... ಈ ಹುಡುಗಿ ನಿನ್ನಲ್ಲಿ ಮಾತನಾಡ್ಬೇಕೂಂತ ಅಷ್ಟೊತ್ತಿಂದ ಕಾಯಿತಿದ್ಲು ಪಾಪ' ಎಂದು ಶಾರದಮ್ಮನವರು ಸವಿತಾಳನ್ನು ತೋರಿ ನುಡಿದಾಗ ಕರುಣಾಕರ, 'ಸುಮ್ನಿರಮ್ಮ ನೀನು, ಏನೇನೋ ಹೇಳ್ಬೇಡ. ನನ್ನಲ್ಲಿ ಮಾತ್ನಾಡುವಂತ ವಿಷಯ ಅವರಿಗೇನಿರುತ್ತೆ' ಎನ್ನುತ್ತಲೇ ಹೋಗಿ ರೂಮ್ ಸೇರಿಕೊಂಡನು.

'ನೋಡಿದ್ಯಾ... ಎಲ್ಲಾ ವಿಷಯಾನೂ ಹೇಳಿದ್ದಾಗಿದೆ ನಾನು. ಆದ್ರೂ ಗೊತ್ತೇ ಇಲ್ಲದಂತೆ ಹೋಗಿ ರೂಮ್ ಸೇರ್ಕೊಂಡ' ಶಾರದಮ್ಮನವರು ಸವಿತಾ ಮುಂದೆ ನುಡಿಯುತ್ತಿದ್ದಂತೆಯೇ ಖುಷಿ ತಂದೆಯ ಹಿಂದೆಯೇ ಓಡಿ ಅವನ ರೂಮ್ ಹೊಕ್ಕಿದ್ದಳು.

'ಬಾ ಇಲ್ಲಿ' ಎಂದ ಶಾರದಮ್ಮನವರು ಸವಿತಾಳನ್ನು ತಮ್ಮ ಜೊತೆ ಅಡುಗೆ ಮನೆಗೆ ಕರೆದೊಯ್ದು ಪ್ಲಾಸ್ಕ್‌ನಲ್ಲಿದ್ದ ಟೀಯನ್ನು ಲೋಟವೊಂದಕ್ಕೆ ಬಗ್ಗಿಸಿ, ಆ ಲೋಟವನ್ನು ಅವಳ ಕೈಗಿಡುತ್ತಾ, 'ತಗೊಂಡು ಹೋಗಿ ಅವನಿಗೆ ಕೊಡಮ್ಮ' ಎಂದರು. ಸವಿತಾ ಅನುಮಾನಿಸುತ್ತಾ ನಿಂತಾಗ,

'ಏನಾಗಲ್ಲ. ತಗೊಂಡು ಹೋಗಿ ಕೊಡು. ಹಾಗೇ ಸ್ವಲ್ಪ ಮಾತನಾಡು. ಅವನ ಸ್ವಭಾವ, ಮನಸ್ಸು ಏನೂಂತ ತಿಳಿದಂತಾಗುತ್ತೆ' ಎಂದು ಶಾರದಮ್ಮನವರೇ ಒತ್ತಾಯಿಸಿದಾಗ ಸವಿತಾ ಟೀ ಕಪನ್ನು ಹಿಡಿದು ಕರುಣಾಕರನ ಕೋಣೆಯೆಡೆ ನಡೆದರೆ, ಶಾರದಮ್ಮನವರು ಅಡುಗೆ ಮನೆ ಬಾಗಿಲಿಗೆ ನಿಂತು, 'ಖುಷಿ... ಏ... ಖುಷಿ... ಬಾರಮ್ಮ ಇಲ್ಲಿ' ಎಂದು ಮೊಮ್ಮಗಳನ್ನು ಕೂಗಿ ಕರೆದಿದ್ದರು. ಖುಷಿ ಅಜ್ಜಿಯ ಕರೆಗೆ ಓಗೊಡುತ್ತಾ ಕರುಣಾಕರನ ಕೋಣೆಯಿಂದ ಹೊರಬಂದಿದ್ದರೆ, ಸವಿತಾ ಕರುಣಾಕರನ ಕೋಣೆಯನ್ನು ಹೊಕ್ಕಿದ್ದಳು.

'ಟೀ ತಗೊಳ್ಳಿ' ಎಂದು ಸವಿತಾ ಕರೆಯುವಾಗ ವಾರ್ಡ್ರೋಬ್‌ನಿಂದ ಬಟ್ಟೆ ತೆಗೆಯುತ್ತಿದ್ದವನು ತಕ್ಷಣ ತಿರುಗಿ, 'ನೀವಾ?..' ಎಂದನು ಕ್ಷಣ ಗಲಿಬಿಲಿಯಿಂದ. ಸುಧಾರಿಸಿಕೊಂಡು, 'ನೀವ್ಯಾಕೆ ತರೋದಿಕ್ಕೆ ಹೋದ್ರಿ. ನಾನೇ ಬರ್ತಿದ್ದೆ' ನುಡಿದನು.

'ಪರವಾಗಿಲ್ಲ. ಅಮ್ಮ ತಗೊಂಡು ಹೋಗಿ ಕೊಡು ಅಂದ್ರು ಅದ್ಕೆ ತಂದೆ. ಅದ್ರಲ್ಲೇನು, ತಗೊಳ್ಳಿ' ಎಂದೆನ್ನುತ್ತಾ ಸವಿತಾ ಟೀ ಲೋಟವನ್ನು ಅವನೆಡೆ ಚಾಚಿದಳು. ಕರುಣಾಕರ ಲೋಟವನ್ನು ಪಡೆದುಕೊಂಡನು.

'ನಿಮ್ಮ ಅಮ್ಮ ನನ್ನನ್ನು ಈ ಮನೆಯ ಸೊಸೆಯನ್ನಾಗಿಸಿಕೊಳ್ಳಬೇಕೂಂತ ತುಂಬಾ ಆಸೆ ಪಡ್ತಿದ್ದಾರೆ. ನನ್ನ ಅಕ್ಕ, ಮನೆಯವರೆಲ್ಲ ಈ ಸಂಬಂಧವನ್ನು ಒಪ್ಕೊಂಡಿದ್ದಾರೆ. ನಿಮ್ಮ ಮನಸ್ಸು ಹೇಗೋ ನನಗೆ ಗೊತ್ತಿಲ್ಲ. ನಿಮ್ಮ ಅಮ್ಮನ ಹತ್ರ ನೀವು, 'ಆ ಹುಡುಗಿಗಿದು ಮೊದಲ ಮದುವೆ. ನಾನೀಗಾಗಲೇ ಮದುವೆಯಾಗಿ ಒಂದು